‘ಅವನು ಹೋಗ್ಬಿಟ್ನಂತೆ, ಅವನ ಮನೆಯವರಿಂದ ಸಂದೇಶ ಬಂತು’ ಭಾವನವರಿಂದ ಸುದ್ದಿ.

ನನಗೆ ದೊಡ್ಡ ಆಘಾತ ಅನ್ನಿಸಿರಲಿಲ್ಲ.

‘ಮುಂದಿನ ಕಾರ್ಯಗಳಿಗೆ ಕಾಂಟ್ರಾಕ್ಟ್ ಕೊಟ್ಬಿಡೋಣ, ಶ್ರೀರಂಗಪಟ್ಟಣದಲ್ಲಿ... ಇಲ್ಲಿ ಬೇಡ, ಬರೀ ನಾವುಗಳೇ–ಇನ್ಯಾರನ್ನೂ ಕರಿಯೋ ಹಾಗೂ ಇಲ್ಲ.’

ನಾನು ಪ್ರತಿಕ್ರಿಯಿಸಲು ಹೋಗಿರಲಿಲ್ಲ. ಅಲ್ಲಿಯವರೆಗೂ ತಾಳಿ, ಕಾಲುಂಗುರವಿದ್ದ ವಿಧವೆ ಬಾಳು, ಈಗ ವಿದ್ಯುಕ್ತವಾಗಿ! ನಿಟ್ಟುಸಿರೊಂದು ಹೊರಬಂದಿತ್ತು.

‘ಒಬ್ಬ ಜವಾಬ್ದಾರಿ ಅಪ್ಪನಾಗಿ ನಡ್ಕೊಂಡಿದ್ರೆ ಯೋಚನೆ ಮಾಡಬಹುದಿತ್ತು’ ವಿಷಯ ತಿಳಿಸಿದಾಗ ಜಿಷ್ಣು ಛೀಕರಿಸಿದ್ದ. ‘ಇಲ್ಲಿಂದ ಬಂದು ಹೋಗೋ ಖರ್ಚು ಲಕ್ಷಗಟ್ಟಲೆ ಆಗುತ್ತೆ, ಸುಮ್ಮನೆ ದುಡ್ಡು ದಂಡ, ಇದ್ದಾಗ ಸಂಸಾರಕ್ಕೆ ಒಂದು ದಿನ ಪ್ರೀತಿ ತೋರಲಿಲ್ಲ, ಸತ್ತ ಮೇಲೆ ಮುಖ ನೋಡಬೇಕು ಅನ್ನೋ ಯಾವ ಸೆಂಟಿಮೆಂಟೂ ನನಗಿಲ್ಲ. ಹೆಸರಿಗೊಂದು ಇನಿಷಿಯಲ್ ಅನ್ನೋದು ಬಿಟ್ರೆ ಬೇರಾವ ಗೌರವವೂ ಇಲ್ಲ’ ಸಿಡುಕುತ್ತಲೇ ತನ್ನ ನೋವು–ಅವಮಾನಗಳನೆಲ್ಲ ಕಕ್ಕಿದ್ದ. ‘ದೊಡ್ಡಪ್ಪನೇ ಎಲ್ಲ ಕಾರ್ಯ ವಹಿಸಿಕೊಂಡಿದ್ದಾರೆ ಅಂದರೆ, ಆ ಋಣ ನಮಗೆ ಬೇಡ’ ಎಂದು ನನ್ನ ಅಕೌಂಟ್‌ಗೆ ದುಡ್ಡು ಹಾಕಿದ್ದ.

ವಿಷಯ ಸ್ವಲ್ಪ ತಣ್ಣಗಾದ ಮೇಲೆ, ಕರೆಮಾಡಿ,

‘ಎನಫ್ ಆಫ್ ಸಫರಿಂಗ್ಸ್ ಮಾ, ನೀ ಖುಷಿಯಾಗಿರು, ನಿನಗೆ ಇಷ್ಟವಿದ್ರೆ ಇನ್ನೊಂದು ಮದುವೆಯಾಗು, ದೀಸ್ ಡೇಸ್ ಇಟ್ ಈಸ್ ವೆರಿ ಕಾಮನ್, ಯು ಡಿಸರ್ವ್ ಎ ಗುಡ್ ಪಾರ್ಟನರ್. ಅಜ್ಜಿ ಮನೆಯವರೋ, ದೊಡ್ಡಪ್ಪನೋ, ಇನ್ಯಾರೋ ಏನೋ ಅಂದ್ಕೊತಾರೆ ಅಂತ ಹೆಸಿಟೇಟ್ ಮಾಡಬೇಡ. ನಮ್ಮ ಕಷ್ಟ ನಾವೇ ಪಟ್ವಿ. ಹಾಗೇ ನಮ್ಮ ಸಂತೋಷಕ್ಕೆ ಯಾರ ಅಪ್ಪಣೇನೂ ಬೇಕಿಲ್ಲ. ಆಯ್ಕೆ ಸರಿಯಾಗಿದ್ರೆ ಎಲ್ಲರೂ ಬೆನ್ನು ತಟ್ಟೋವ್ರೇ. ನಾನು ನಿನ್ನ ಎಲ್ಲ ನಿರ್ಣಯಗಳಿಗೂ ಜೊತೆ ಇರ್ತೀನಿ’ ಎಂದು ದೊಡ್ಡ ದೊಡ್ಡ ಮಾತುಗಳನ್ನಾಡಿದ್ದ.

ಅವನು ಹೇಳಿದ್ದರಲ್ಲಿ ತೆಗೆದುಹಾಕುವಂತಹದ್ದೇನೂ ಕಂಡಿರಲಿಲ್ಲ. ‘ನೋಡೋಣ ಆ ಕಾಲ ಬಂದಾಗ’ ಎಂದಿದ್ದೆ ನಿರ್ಭಾವುಕಳಾಗಿ.

ಈ ನಡುವೆ ನನ್ನ ಉದ್ದಕ್ಕೂ ಮಾನಸಿಕವಾಗಿ ಬೆಂಬಲಕ್ಕೆ ನಿಂತಿದ್ದು ನನ್ನ ಗೆಳತಿ ಮಾನಸಿ ಒಬ್ಬಳೇ.

***

ಮಾನಸಿ ಮತ್ತೆ ಕರೆ ಮಾಡಿದ್ದಳು, ‘ಚಿಕ್ಕಪ್ಪ ಕೇಳಿದರು ‘ಬರ್ತಾಳೆ’ ಅಂತ ಹೇಳಿದ್ದೀನಿ’.

‘ಮಾನ್ಸಿ, ನನಗೆ ಸಂಕೋಚವಾಗುತ್ತೆ, ಪ್ಲೀಸ್ ಅರ್ಥಮಾಡ್ಕೊ’ ಗೋಗರೆದಿದ್ದೆ.

‘ನಿನ್ನ ಯಾವ ಸಬೂಬೂ ಬೇಕಿಲ್ಲ’ ಖಾರ ಲೇಪಿಸಿದ ಸಿಹಿ. ‘ಕಾರ್ಯಕ್ರಮದಲ್ಲಿ ನಾನು ಬಿಝಿ ಇರ್ತೀನಿ ಅಂತ ತಾನೆ ನಿನ್ನ ಇನ್ನೊಂದು ನೆಪ?’

ಹೌದು, ಮಾನ್ಸಿಯ ಕೊನೆಯ ಮೈದುನನಿಗೆ ಮದುವೆ, ಇವಳೇ ದೊಡ್ಡ ಸೊಸೆ, ಇವಳ ಓಡಾಟವೇ ಜಾಸ್ತಿ. ನಾನು ಅಲ್ಲಿ ಒಬ್ಬಳೇ ಅಂದರೆ ಒಂಥರಾ ಕಸಿವಿಸಿ ಅಲ್ದೆ ಇನ್ನೇನು? ನನಗೆ ತಿಳಿದವರ್‍ಯಾರೂ ಬರ್ತಿಲ್ಲ. ನನ್ನ ಯೋಚನೆ ನನಗೆ.

‘ಶ್ರೀಲೋಲ ಬರ್ತಿದ್ದಾನೆ, ನಿನಗೆ ಮೊದಲೇ ಹೇಳಿದ್ದೆನಲ್ಲ? ನಿನ್ನ ಬಗ್ಗೆ ಹೇಳಿದ್ದೀನಿ ಒಮ್ಮೆ ಯೋಚಿಸಬಹುದಲ್ಲ?’

***

ಮಾನಸಿಯ ಕರೆ ಮುಗಿಯುತ್ತಲೇ ಮತ್ತೆ ಯೋಚನೆ. ಮದುವೆಗೆ ಹೋಗಬೇಕೆ? ಬೇಡ ಎನ್ನಲು ಇದ್ದ ಕಾರಣಗಳು ಮೆಲ್ಲನೆ ಹಿಂದಕ್ಕೆ ಸರಿಯತೊಡಗಿದವು. ಎಷ್ಟು ದಿನ ಎಲ್ಲಿಗೂ ಹೋಗದೆ ಯಾರಲ್ಲೂ ಬೆರೆಯದೇ ನನ್ನನ್ನು ನಾನು ನಿರ್ಬಂಧಿಸಿಕೊಳ್ಳಬೇಕು? ಅವರು ಇದ್ದೂ ಇಲ್ಲದಾಗ ಒಂದು ಕಷ್ಟ ಈಗ ಇಲ್ಲವೇ ಇಲ್ಲ ಅಂದಾಗ ಇನ್ನೊಂದು ರೀತಿ ತುಮುಲ. ಮೊದಲಿನಂತೆ ಯಾರ ಮನೆಗೂ ಮುತ್ತೈದೆ ಶಾಸ್ತ್ರಕ್ಕೆ ಹೋಗಲು ಮನಸು ಬಾರದು. ಕುಂಕುಮ ತೆಗೆದುಕೊಳ್ಳಲು ಹಿಂಜರಿಕೆ.

